INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,58-64
Peer Reviewed Journal, Referred Journal

# ಜಾತಿ ವ್ಯವಸ್ಥೆಯ ವಿರುದ್ಧ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಹೋರಾಟಗಳು

ಡಾ. ಜಯರಾಮು.[1]

ಭಾರತೀಯ ಇತಿಹಾಸದಲ್ಲಿ ಕಂಡುಬಂದಂತಹ ಪ್ರಮುಖ ಸಮಾಜ ಸುಧಾರಕರಲ್ಲಿ ಅಂಬೇಡ್ಕರ್ ಅವರು ಒಬ್ಬರು. ಇವರು ಈ ನೆಲೆದ ಮೂಲನಿವಾಸಿಗಳಾದಂಥ ಅಸ್ಪೃಶ್ಯರ ಜನಾಂಗದ ಜೀವಂತ ಧ್ವನಿ, ಮಹಾನ್ ಮೇಧಾವಿ, ಹೋರಾಟಗಾರ, ಮಾನವತಾವಾದಿ, ಸಮಾನತೆಯ ಹರಿಕಾರ, ಶೋಷಿತರ ವಿಮೋಚನಾ ಧ್ವನಿಯಾಗಿದ್ದಾರೆ. ಭಾರತೀಯ ಸಮಾಜದಲ್ಲಿನ ಉನ್ನತ ವರ್ಗದವರು ಜಾತಿ, ಅಸ್ಪೃಶ್ಯತೆ, ಧಾರ್ಮಿಕ ತಾರತಮ್ಯಗಳಿಂದ ಇವರನ್ನು ಸಮಾಜದ ಆಗು ಹೋಗುಗಳಿಂದ ಸಂಪೂರ್ಣವಾಗಿಯೇ ದೂರವಿಟ್ಟಿರುತ್ತಾರೆ. ಇಂಥವುಗಳ ವಿರುದ್ಧ ಅಂಬೇಡ್ಕರ್ ತಮ್ಮ ಜೀವನ ಪರ್ಯಂತ ಹೋರಾಟ ಮಾಡಿರುವುದು ಚರಿತ್ರೆಯಲ್ಲಿ ದಾಖಲಾಗಿರುತ್ತದೆ. ಏಕೆಂದರೆ, ಸ್ವತಃ ಅಸ್ಪೃಶ್ಯತೆಯ ಜನವರ್ಗದಲ್ಲಿ ಜನ್ಮವನ್ನು ತಾಳಿ ಅದರ ನೋವು ನಲಿವುಗಳನ್ನು ಅನುಭವಿಸಿ, ಅದರ ವಿರುದ್ಧ ತಮ್ಮ ಬಹುದೊಡ್ಡ ಸಮರವನ್ನೇ ಸಾರಿರುತ್ತಾರೆ. ಏಕೆಂದರೆ ಸಮಾಜದಲ್ಲಿ ಮುಗ್ಧ ಮತ್ತು ಅಸಹಾಯಕರಾದ ತನ್ನ ಜನಾಂಗದ ಅಭಿವೃದ್ಧಿಗಾಗಿ ಹಲವು ಹತ್ತು ಸಾಮಾಜಿಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತಾರೆ. ಬಾಬಾಸಾಹೇಬ್ ಅವರನ್ನು "ಅಸ್ಪೃಶ್ಯತೆಯಲ್ಲಿ ಅರಳಿದ ಹೂವು" ಎನ್ನಬಹುದು. ಅವರು ತಮ್ಮ ಜೀವಿತಾವಧಿಯಲ್ಲಿ ಸಮಾಜ ಸುಧಾರಣಾ ಕ್ಷೇತ್ರಕ್ಕೆ ನೀಡಿದ ಸುಧಾರಣಾ ಪ್ರಸ್ತುತ ಅಧ್ಯಯನದಲ್ಲಿ ಕ್ರಮಗಳನ್ನು ಗುರುತಿಸಬಹುದು.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಲಕ್ಷಣವೆಂದರೆ ಜಾತಿ ವ್ಯವಸ್ಥೆ. ಇದು ಸಾಮಾಜಿಕ ವ್ಯವಸ್ಥೆಗೆ ತಳಪಾಯವಷ್ಟೆ ಅಲ್ಲ. ಸಾಮಾಜಿಕ ಸಂಸ್ಥೆಯಾಗಿ ಬಲಗೊಂಡು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಮುಂದುವರೆಯುತ್ತಿರುವುದನ್ನು ಕಾಣಬಹುದು. ಜಾತಿ ಎಂದರೆ; ಆಳುವ ವರ್ಗಗಳು ಶ್ರಮ, ಶ್ರಮ ಶೋಷಣೆಗೆ ನಿರ್ಮಿಸಿಕೊಂಡ ಕೆಟ್ಟಯೇ ಆಗಿರುತ್ತದೆ. ಈ ವ್ಯವಸ್ಥೆಯೇ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ದುಡಿಯುವ ಸಮೂಹಗಳು ಶೋಷಿಸುವ ಹಾಗೂ ದಮನಿಸುವ ಕಾರ್ಯಗಳಲ್ಲಿ ಪ್ರಧಾನ ಪಾತ್ರ

---

1. ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಣಸೂರು.

ವಹಿಸುತ್ತಿವೆ. ಆಧುನಿಕ ಕಾಲದ ಸನ್ನಿವೇಶಕ್ಕೆ ಹೋಲಿಸಿ ಹೇಳುವುದಾದರೆ; ಪೂಜಾರಿಯ ಸ್ಥಳದಲ್ಲಿ ಪುರೋಹಿತ, ಪಟೇಲನ ಸ್ಥಳದಲ್ಲಿ ಪೋಲಿಸ್, ವರ್ತಕನ ಜಾಗದಲ್ಲಿ ಜಾಗತೀಕರಣಗಳು ಬಂದು ಕುಳಿತಿವೆ. ಯಾವ ಹಾವಾದರೇನು ವಿಷವೊಂದೆ ಎಂಬಂತೆ ವೈರಿಯಾದರೇನು ಅವರೆಲ್ಲ ಒಂದೇ ಎನ್ನುವ ಸಂದರ್ಭದಲ್ಲಿ ಸಮಾಜದಲ್ಲಿ ಅಸ್ಪೃಶ್ಯರೆಂದು ಜೀವನ ಸಾಗಿಸಬೇಕಾಗಿದೆ.

ಮನುಷ್ಯ ಪ್ರಾಣಿ ಪ್ರಪಂಚದಿಂದ ಬೇರ್ಪಟ್ಟ ಅನಂತರ ಸಮಾಜದಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದಾಗ ಹಾಗೂ ಪರಿಶೀಲಿಸಿದಾಗ ಮಾತ್ರ ಜಾತಿ ವರ್ಗ ಎಂಬ ಪ್ರಶ್ನೆ ಕುರಿತು ಒಂದು ಸ್ಪಷ್ಟವಾದ ಅಭಿಪ್ರಾಯ ಅಥವಾ ನಿಲುವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಜಾತಿ ವ್ಯವಸ್ಥೆಗೆ ಮೂರು ಸಾವಿರ ವರ್ಷಗಳ ಚರಿತ್ರೆಯಿದೆ. ಜಾತಿ, ವರ್ಗ ಸಮಾಜದ ಬೆಳವಣಿಗೆಗೆ ರಾಜ್ಯದ ಪ್ರಭುತ್ವ ಉಗಮ, ಊಳಿಗಮಾನ್ಯ ಉತ್ಪಾದನ ವಿಧಾನದ ಬೆಳವಣಿಗೆ ಹಾಗೂ ನಿರಂತರವಾದ ಆದರೆ ತಮ್ಮದೇ ಆದ ರೂಢಿ ಸಂಪ್ರದಾಯಗಳನ್ನು ಜಾತಿ ವ್ಯವಸಾಯದ ಆರ್ಥಿಕತೆಯೊಂದಿಗೆ ನಿರ್ಬಂಧಿತವಾಗಿ ಅಂತರ್ಗತ ಮಾಡಿಕೊಂಡಿರುವುದರೊಂದಿಗೆ ಬೇರ್ಪಡಿಸಲಾರದಂತೆ ಬೆಸೆದುಕೊಂಡಿದೆ.'

"ಅಂಬೇಡ್ಕರ್ ಅವರು ಜಾತಿಯನ್ನು ಕುರಿತು A reformer rebuilds the old structure a revolutionary blows up old structure and builds a new one ಎಂದು ಅಭಿಪ್ರಾಯ ಪಡುತ್ತಾರೆ.ಪರಿಹಾರ ರೂಪವಾಗಿ ಜಾತಿ ಕುರಿತು ಇದ್ದದ್ದು ಅದನ್ನು ನಿರ್ಮೂಲನೆ ಮಾಡುವ ತೀವ್ರ ಹಠದ ಕಡೆಗೆ ಹೊರತು ಅದನ್ನು ಸುಧಾರಿಸುವುದರ ಕಡೆಗೆ ಅಲ್ಲ ಎಂದರು.ಜಾತಿಯೆಂಬ ಅನಿಷ್ಟ ಪದ್ಧತಿಯನ್ನು ಕಿತ್ತೆಸೆಯಲು ತಮ್ಮ ಇಡೀ ಜೀವಮಾನದುದ್ದಕ್ಕೂ ಹೋರಾಟ ಮಾಡಿದರು. ಭಾರತದ ಇತಿಹಾಸದಲ್ಲಿಯೇ ವರ್ಗ ಜಾತಿಯನ್ನು ಅದರಲ್ಲಿರುವ ಕರಾಳ ಮುಖವನ್ನು ಸೆಳೆ-ಸೆಲೆಯಾಗಿ ಬಿಡಿಸಿಟ್ಟರು'. ಭಾರತೀಯ ಹಿಂದೂ ಜಾತಿ ಎನ್ನುವುದು ದುರ್ಗಮ ಕೋಟ, ಜಾತಿ ಎನ್ನುವುದು ಪ್ರತಿಷ್ಠಿತ ವರ್ಗ, ಒಂದು ಪೂರ್ವನಿಶ್ಚಿತ ಬದುಕಿನ ವಿಧಾನ ಭಾರತೀಯ ಇತಿಹಾಸದಲ್ಲಿ ಜಾತಿ ಇರುವವರೆಗೂ ಹಿಂದೂಗಳು ಅಂತರ್‌ಜಾತಿ ವಿವಾಹವಾಗಲೂ ಅಥವಾ ಹೊರಗಿನವರೊಂದಿಗೆ ಸಂಬಂಧವನ್ನು ಏರ್ಪಡಿಸಲು ಅಥವಾ ಹಿಂದೂಗಳು ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ವಲಸೆ ಹೋಗಲು ಸಾಧ್ಯವಿಲ್ಲ. ಭಾರತೀಯ ಜಾತಿ ವ್ಯವಸ್ಥೆಯು ಒಂದು ಜಗತ್ತಿನ ಸಮಸ್ಯೆಯಾಗಿದೆ. ಜಾತಿವ್ಯವಸ್ಥೆ ಎನ್ನುವುದು ಜಗತ್ತಿನ ಯಾವ ದೇಶಗಳಲ್ಲೂ ಕಾಣಸಿಗದೆ ಭಾರತಕ್ಕೆ ವಿಶೇಷವಾಗಿ ಅಂಟಿರುವ ಪಾಪವೆಂದು ಸ್ಪಷ್ಟವಾಗಿ ತಿಳಿಸಿದ್ದರು.

ಜಾತಿಯೆನ್ನುವುದು ಪ್ರತ್ಯೇಕಗೊಂಡ ವಿಶೇಷ ಘಟಕ ಹಾಗೂ ಇನ್ನೊಂದು ಘಟಕದೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ನಿರಾಕರಿಸುತ್ತದೆ. ಜೊತೆಯಾಗಿ ಊಟ ಮಾಡುವಂತಿಲ್ಲ, ವಿವಾಹವಾಗುವಂತಿಲ್ಲ, ವೃತ್ತಿಗಳನ್ನು ಮಾಡುವಂತಿಲ್ಲ. ಹೀಗೆ ಅಡ್ಡ ಗೋಡೆಗಳು ನಿರ್ಮಾಣವಾಗಿದೆ. ಜಾತಿಗಳು ಮತ್ತೊಂದು ಜಾತಿಯಾಗಿ ಉತ್ಪತ್ತಿಯಾಗಿ ಭಾರತದ ತುಂಬಾ ಈ ಜಾತಿ ಉಪಜಾತಿಗಳೇ

ತುಂಬಿ ಹೋಗಿವೆ. ಇಂದಿನ ಆಧುನಿಕ ಕಾಲದಲ್ಲಿಯೂ ಕೂಡ ಸಮಾಜದ ಮುಂದಿರುವ ಸವಾಲುಗಳಾಗಿ ಪರಿಣಮಿಸಿವೆ. ಕಸುಬು, ಬುಡಕಟ್ಟು, ಜನಾಂಗದ ಸಂಘಟನೆ, ಪಳಯುಳಕೆಗಳು, ಹೊಸನಂಬಿಕೆಯ ಉದಯ, ಅಂತರ್‌ಜಾತಿಯ ಸಂತಾನ ವಲಸೆ' ಈ ಕಾರಣಗಳಿಂದಾಗಿ ಅಸಂಖ್ಯಾತವಾಗಿ ಸೃಷ್ಟಿಯಾಗುತ್ತಾ ಬೆಳೆದಿವೆ ಎಂದು ಚಿಂತಕರು ಹೇಳುತ್ತಾರೆ. ಅಂಬೇಡ್ಕರ್ ಅವರು ಜಾತಿಗಳು ಮನುವಿಗಿಂತ ಮೊದಲಿದ್ದವು ಎಂದು ತಿಳಿಸುತ್ತಾರೆ.

ಆರಂಭದಲ್ಲಿನ ಜಾತಿಯ ವರ್ಗಗಳೆಂದರೆ; ಬ್ರಾಹ್ಮಣರು ಅಥವಾ ಪುರೋಹಿತ ವರ್ಗ, ಕ್ಷತ್ರಿಯರು ಅಥವಾ ಸೈನಿಕ ವರ್ಗ, ವೈಶ್ಯರು ಅಥವಾ ವರ್ತಕ ವರ್ಗ, ಶೂದ್ರ ಮತ್ತು ಕಸುಬುದಾರರು ಮುಂದೆ ಈ ವರ್ಗಗಳ ನಡುವೆ ಸಮ್ಮಿಲನಗೊಂಡ ಜನ ಅಥವಾ ಯುದ್ಧದಲ್ಲಿ ಸೆರೆ ಸಿಕ್ಕಿದಂತಹ ಪಂಚಮ. ಅಥವಾ ಅಸ್ಪೃಶ್ಯರಾಗಿರಬಹುದು ಎಂದು ಅಂಬೇಡ್ಕರ್ ಅವರು ತಿಳಿಸಿದ್ದಾರೆ. ಇಂತಹ ಜಾತಿ ವ್ಯವಸ್ಥೆಯನ್ನು ಸೈದ್ಧಾಂತಿಕಗೊಳಿಸಿದ್ದನ್ನು ಕಟ್ಟುನಿಟ್ಟಿನ ಅಲಿಖಿತ ಸಂವಿಧಾನವನ್ನು ರಚಿಸಿದವನು "ಮನು" ಎಂದು ಅಂಬೇಡ್ಕರ್ ಅವರು ಧೈರ್ಯವಾಗಿಯೇ ತಿಳಿಸಿದ್ದಾರೆ. ಒಂದು ಅರ್ಥದಲ್ಲಿ ಅಂಬೇಡ್ಕರ್ ಅವರಿಗೆ ಮನುವನ್ನು ಕಂಡರೆ ಕೆಂಡದಂತಹ ಕೋಪ, ಭಾರತೀಯ ಅವೈಜ್ಞಾನಿಕ ಕಾನೂನಿನ ಜನಕನಾದ ಈ ವ್ಯಕ್ತಿ ಬದುಕಿದ್ದು ನಿಜವೇ ಆಗಿದ್ದರೆ ನಿಶ್ಚಿತವಾಗಿಯೂ ಆತ ನಿರ್ಲಜ್ಜ ವ್ಯಕ್ತಿ ಎಂದು ಹೇಳಿದ್ದಾರೆ. ಅಂಬೇಡ್ಕರ್ ಅವರು ಮನುಸ್ಮೃತಿಯು ಅಸಮಾನತೆಯ ವಿಚಾರವನ್ನು ಪ್ರತಿಪಾದಿಸುತ್ತದೆಂದು 25-12-1927ರಲ್ಲಿ ಸಾರ್ವಜನಿಕವಾಗಿ ಅದನ್ನು ಸುಟ್ಟು ಹಾಕಿದರು. ಈ ಮಹತ್ವದ ಕಾರ್ಯದಲ್ಲಿ ಬ್ರಾಹ್ಮಣನಾದ ಸಹಸ್ರಬುದ್ಧೆ, ಚಮ್ಮಾರನಾದ ರಾಜ್ ಬೋಜ್ ಮತ್ತು ಗಂಗೂಬಾಯಿ ಸಾವಂತೇ ಎಂಬಂಥ ಮಹಿಳೆಯೂ ಕೂಡ ಕೈಜೋಡಿಸಿದ್ದಾರೆ. ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯನ್ನು ಕುರಿತು ತಮ್ಮ ಅಧ್ಯಯನದಲ್ಲಿ ನಾಲ್ಕು ಅಂಶಗಳನ್ನು ತಿಳಿಸಿದ್ದಾರೆ. ಅವುಗಳೆಂದರೆ;

1. ಹಿಂದೂ ಜನಾಂಗ ಒಂದು ಸಂಕೀರ್ಣವಾಗಿ ರಚನೆಯಾಗಿದ್ದರೂ ಅದರಲ್ಲೊಂದು ಆಳವಾದ ಚಿಂತನಾಕ್ರಮವನ್ನು ಉಲ್ಲೇಖಿಸಿದರು.'
2. ವ್ಯಾಪಕವಾದ ಸಾಂಸ್ಕೃತಿಕ ಘಟಕದ ಪ್ರತಿಯೊಂದು ಭಾಗವನ್ನು ಜಾತಿಯು ಹೆಣೆದು ನಿಲ್ಲಿಸಿದೆ.
3. ಪ್ರಾರಂಭದಲ್ಲಿದ್ದುದು ಒಂದೇ ಜಾತಿ
4. ಅನುಕರಣೆಯಿಂದಲೂ ಮತ್ತು ಬಹಿಷ್ಕರಿಸಿದರಿಂದಲೇ ವರ್ಗಗಳೇ ಜಾತಿಗಳಾಗಿ ಪರಿಗಣಿಸಿ ಅನುಸರಿಸುವ ಮತ್ತು ಬಹಿಷ್ಕೃತ ಸಮೂಹವನ್ನು ಉಳಿದ ಜಾತಿಗಳು ಮತ್ತೊಂದು ಜಾತಿಯಾಗಲು ಒತ್ತಾಯಿಸುವ ಒಳಸಂಚನ್ನು ಗುರುತಿಸಬಹುದಾಗಿ ಒಂದು ಹಂತದಲ್ಲಿ ಜಾತಿ ನೈತಿಕ, ಧಾರ್ಮಿಕ, ಸಾಮಾಜಿಕ ಸಂಹಿತೆಯನ್ನು ಗಂಭೀರವಾಗಿ ವಿರೋಧಿಸುವ ಹೊಸ ಬದಲಾವಣೆಯನ್ನು ಜಾತಿ ಸಹಿಸಲಾರದು. ಸಂಹಿತೆಯನ್ನು ಉಲ್ಲಂಘಿಸುವ ಧೈರ್ಯಶಾಲಿಗೆ ಜಾತಿಗಳು ಕರುಣೆ ತೋರುವುದಿಲ್ಲ. ಜಾತಿಯೊಳಗಡೆ ಅಡಗಿಕೊಂಡಿರುವ ಕ್ರೌರ್ಯ ತನ್ನನ್ನು

ತಾನೇ ಸಂರಕ್ಷಿಸಿಕೊಳ್ಳಲು ಹಲವು ಹುನ್ನಾರುಗಳನ್ನು ನಿರ್ಮಿಸಿಕೊಂಡಿವೆ ಇದಕ್ಕೆ ಕಾರಣಗಳೆಂದರೆ

ಎ. ಸತಿಪದ್ಧತಿ ಅಥವಾ ಸತಿಯನ್ನು ಪತಿಯೊಂದಿಗೆ ಸುಟ್ಟುಬಿಡುವುದರಿಂದ ಜಾತಿಸಂಕಟವನ್ನು ತಪ್ಪಿಸಲೆತ್ನಿಸಿದೆ.

ಬಿ. ವಿಧವೆ ಮರು ಮದುವೆಯಾಗದಂತೆ ಆಕೆಗೆ ಆಜ್ಞೆ ವಿಧಿಸಲಾಗದೆ

ಸಿ. ಹೆಣ್ಣು ಮಕ್ಕಳನ್ನು ಬಾಲ್ಯವಿವಾಹ ಮಾಡಿಬಿಡುವುದು.'

ಮೊದಲನೆಯದಾಗಿ, 1936ರಲ್ಲಿ 'ಜಾತಿ ನಿರ್ಮೂಲನೆ' ಎಂಬ ಪುಸ್ತಕವನ್ನು ಬರೆದ ಡಾ.ಅಂಬೇಡ್ಕರ್ ಅವರು ಅದರಲ್ಲಿ ಗಾಂಧೀಜಿ ಅವರು ಹಾಕಿಕೊಂಡ ಹರಿಜನೋದ್ಧಾರ ಕಾರ್ಯಕ್ರಮಗಳ ಉದ್ದೇಶವನ್ನು ಪ್ರಶ್ನಿಸುತ್ತಾರೆ. ಜೊತೆಗೆ ಅಸ್ಪೃಶ್ಯರನ್ನು 'ಹರಿಜನ' ಎಂಬ ಹೆಸರಿನಿಂದ ಕರೆಯುವುದನ್ನು ಪ್ರಖರವಾಗಿಯೇ ಖಂಡಿಸುತ್ತಾರೆ. ಅಸ್ಪೃಶ್ಯರಿಗೆ 'ಹರಿಜನ' ಎನ್ನುವ ಪದವನ್ನು ಕಂಡರಾಗದು. ಅದರ ವಿರುದ್ಧ ಅನೇಕರು ಆಕ್ಷೇಪಣೆಯನ್ನು ಎತ್ತಿದ್ದಾರೆ ಮೊದಲ ಆಕ್ಷೇಪ ಎಂದರೆ ಇದರಿಂದ ಅಸ್ಪೃಶ್ಯರ ಸ್ಥಿತಿಗತಿಗಳು ಸುಧಾರಣೆಯಾಗಿಲ್ಲ ಎಂಬುದಾಗಿತ್ತು.

ಎರಡನೆಯದಾಗಿ, ಅಸ್ಪೃಶ್ಯ ಎಂದು ಕರೆಸಿಕೊಳ್ಳುವುದು ಇಷ್ಟ.ಆದರೆ ಅವರ ವಾದವೇನೆಂದರೆ ಕೆಟ್ಟದನ್ನು ಅದರ ಹೆಸರು ಹಿಡಿದು ಕರೆದರೆ ಸರಿ, ಯಾವುದೇ ಒಬ್ಬ ರೋಗಿಗೆ ತನ್ನ ಕಾಯಿಲೆ ಏನೆಂದು ತಿಳಿದರೆ ಉತ್ತಮ, ಅದೇ ರೀತಿ ಅನ್ಯಾಯ ಇದ್ದಷ್ಟು ಕಾಲ ಅದನ್ನು ನಿವಾರಿಸುವ ಒಳ್ಳೆಯ ಪ್ರಯತ್ನಗಳನ್ನು ಮಾಡುತ್ತಿರಬಹುದು.ಒಬ್ಬ ಗುಲಾಮನನ್ನು ಪದೇ ಪದೇ ಗುಲಾಮ ಎಂದರೆ ಅವನಿಗೆ ಗುಲಾಮ ಪದದ ಅರ್ಥ ಗೊತ್ತಾಗುತ್ತದೆ.ಎಂಬುದು ಅಂಬೇಡ್ಕರ್ ಸಂದೇಶವಾಗಿತ್ತು.

ಮೂರನೆಯದಾಗಿ 'ಹರಿಜನ' ಎನ್ನುವ ಹೆಸರು ದಯೆ, ಅನುಕಂಪಗಳನ್ನು ಸೂಚಿಸುವಂತದ್ದು 'ಅಸ್ಪೃಶ್ಯ' ಎನ್ನುವುದು ಒಂದು ಕೆಟ್ಟ ಹೆಸರು ಅದರಲ್ಲಿ ನಿಷೇಧ, ತಿರಸ್ಕಾರ ಮತ್ತು ದುರ್ವಾಸನೆಗಳಿವೆ. 'ಅಸ್ಪೃಶ್ಯ' ಎಂದ ಕೂಡಲೇ ಅವನನ್ನು ಕುರಿತು ಒಬ್ಬ ಹಿಂದೂ ವ್ಯಕ್ತಿಯ ಧೋರಣೆ ಏನೆಂಬುದು ಖಚಿತಗೊಂಡಿರುತ್ತದೆ ಎಂದು ಗಾಂಧೀಜಿ ಅವರನ್ನು ತರಾಟೆಗೆ ತೆಗೆದುಕೊಳ್ಳುವ ಅಂಬೇಡ್ಕರ್ ಅವರು 'ಅಸ್ಪೃಶ್ಯರು' ದೇವರ ಮಕ್ಕಳಾದರೆ ಸ್ಪೃಶ್ಯರು ರಾಕ್ಷಸರ ಮಕ್ಕಳೇ ಎಂದು ಪ್ರಶ್ನಿಸುತ್ತಾರೆ.ಹಾಗೆಯೇ ಗಾಂಧೀಜಿ ಅವರಿಗೆ ಒಂದು ಉಗ್ರವಾದ ಪತ್ರ ಬರೆದಿರುವುದು ಆಧಾರಗಳಿಂದ ಕಂಡುಕೊಳ್ಳಬಹುದು. ಗಾಂಧೀಜಿ ಅವರ ಕಾರ್ಯಕ್ರಮಗಳು ಎಷ್ಟೊಂದು ನಿರುಪಯುಕ್ತವಾದವು ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

1. ಜಾತಿ ಪದ್ಧತಿಯು ಹಿಂದೂಗಳನ್ನು ಹಾಳುಮಾಡಿದೆ
2. ಚಾತುರ್ವರ್ಣದ ಮೇರೆಗೆ ಹಿಂದೂ ಸಮಾಜವನ್ನು ಪುನರ್ ಸಂಘಟಿಸುವುದು ಅಸಾಧ್ಯ.

ಇಂತಹ ಸಂಘಟನೆ ಮಾಡುವುದು ಅಪಾಯಕಾರಿ ಏಕೆಂದರೆ ವರ್ಣವ್ಯವಸ್ಥೆ ಸಾಮಾನ್ಯ ಸಮೂಹಕ್ಕೆ ಜ್ಞಾನ ಸಂಪಾದನೆ ಹಾಗೂ ಶಾಸ್ತ್ರಭ್ಯಾಸದ ಅವಕಾಶವನ್ನು ನಿರಾಕರಿಸುವುದರಿಂದ ಜನಸಾಮಾನ್ಯರ ಅವನತಿಗೆ ಕಾರಣವಾಗುತ್ತದೆ. ಹಾಗೆಯೇ ಸಮಾನತೆ ಹಾಗೂ ಭ್ರಾತೃತ್ವಗಳನ್ನೊಳಗೊಂಡ ಧರ್ಮವನ್ನು ಆಧರಿಸಿಯೇ ಹಿಂದೂ ಸಮಾಜವನ್ನು ಪುನರ್ ನಿರ್ಮಾಣವಾಗತಕ್ಕದು, ಈ ಗುರಿಯನ್ನು ಸಾಧಿಸಬೇಕಾದರೆ ವರ್ಗ ಮತ್ತು ಜಾತಿಗಳ ಕುರಿತಾದ ಗೌರವ ಭಾವನೆ ನಷ್ಟವಾಗತಕ್ಕದು. ಶಾಸ್ತ್ರಗಳು ದೇವವಾಣಿಯೆಂಬ ಭಾವನೆಯನ್ನು ನಾಶವನಗೋಳಿಸುವುದರಿಂದ ಮಾತ್ರ ಜಾತಿವರ್ಣಗಳ ಮೇಲಿನ ಗೌರವ ನಾಶವಾಗಬಲ್ಲದು.'

ಅಂಬೇಡ್ಕರ್ ಅವರು ಅಸ್ಪೃಶ್ಯತೆ ಅಸ್ಪೃಶ್ಯರನ್ನು ವಿರೋಧಿಸುವುದಕ್ಕಿಂತ ಅವುಗಳನ್ನು ರಚಿಸಿದ ವೇದ, ಸ್ಮೃತಿ ಇತ್ಯಾದಿ ಗ್ರಂಥಗಳ ಪುರೋಹಿತಶಾಹಿಯನ್ನು ಬಹುವಾಗಿ ಪರಿಗಣಿಸುತ್ತಿದ್ದರು. ನೀವು ಎದುರಿಸಬೇಕಾದ ವೈರಿಗಳು ಜಾತಿನಿಷ್ಠ ಸಮಾಜದಲ್ಲಿದ್ದರೆ ಅವರಿಗೆ ಈ ಧರ್ಮವನ್ನು ಭೋದಿಸಿದ ಶಾಸ್ತ್ರಗಳಲ್ಲಿ ಜನರಿಗಿರುವ ನಿಷ್ಠೆಯನ್ನು ನಾಶಪಡಿಸುವುದೇ ನಿಜವಾದ ಮಾರ್ಗ, ಜಾತಿ ಬಹಳ ಪವಿತ್ರವೆಂದು ಭ್ರಾಂತಿ ಹುಟ್ಟಿದ್ದು ನಿಮ್ಮ ಧರ್ಮದಿಂದ ಎಂಬ ಮಾತನ್ನು ಹಿಂದುಗಳಿಗೆ ಹೇಳುವ ಧೈರ್ಯ ಸಮಾಜದಲ್ಲಿನ ಅಸ್ಪೃಶ್ಯರಿಗೆ ಬರಬೇಕು ಧರ್ಮ ಗುರುವಾಗತಕ್ಕಂತೆ ಮನುಷ್ಯ ಕ್ರಾಂತಿಕಾರನಲ್ಲಿ ಧರ್ಮ ಗುರುವಾಗಿರುವ ಮನುಷ್ಯ ಕ್ರಾಂತಿಕಾರನಾಗ ಬಯಸುವುದಿಲ್ಲ ಇಂದು ಮಾರ್ಮಿಕವಾಗಿ ಪಟ್ಟ ಭದ್ರಹಿತಾಶಕ್ತಿಗಳು ಹಾಗೂ ಜಾತಿಯ ಮಠಗಳು ಘೋಷಿಸಿವೆಯೇ ಹೊರತು ಜಾತಿಯನ್ನು ವಿನಾಶಗೊಳಿಸುವುದಿಲ್ಲವೆಂಬ ವಿಚಾರವನ್ನು ಗಂಭೀರವಾಗಿ ಚಿಂತಿಸುವ ಜರೂರು ಅಸ್ಪೃಶ್ಯರ ಮೇಲಿದೆ ಎಂದು ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳಿಗೆ ಹೇಳಿದ್ದಾರೆ.'

ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಇಡೀ ದೇಶಕ್ಕೆ ದೇಶವೇ ಬ್ರಿಟಿಷರೇ ತೊಲಗಿ ಅನ್ನುತ್ತಿದ್ದಾಗ ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಸ್ಪೃಶ್ಯತೆ ತೊಲಗಲಿ ಅಸ್ಪೃಶ್ಯತೆಯನ್ನಾಚರಿಸುವ ಹಿಂದೂಗಳೇ ತೊ®V ಎಂದು ಘರ್ಜಿಸುತ್ತಿದ್ದರು.ಈ ಮಾತುಗಳಿಗೆ ಅವರು ತಮ್ಮ ಒಂದು ಭಾಷಣದಲ್ಲಿ ಹೀಗೆ ಹೇಳಿದ್ದಾರೆ. "You know well that the satyagraha movement started by Gandhi was backed up by the people as it was against a foreign domination our struggle is the mass of caste hindus and naturally we have little support from outside, taking these facts in to consideration. I feel we should not autogonies the government and put on the side of our opposition, it is not beneficial either" ಎಂದು ಈ ಮಾತುಗಳನ್ನು ಯಾವ ಉದ್ದೇಶಕ್ಕಾಗಿ ಅಂಬೇಡ್ಕರ್ ಅವರು ಬ್ರಿಟೀಷರ ಪರವಾಗಿದ್ದರು ಎಂಬುದನ್ನು ಬಹುಸೂಚ್ಯವಾಗಿ ಹೇಳುವಂತಿದೆ. ದುರ್ಬಲಗೊಂಡಿರುವ ಅಸ್ಪೃಶ್ಯ ಮತ್ತು ಶೋಷಿತ ವರ್ಗ ಏಕಕಾಲಕ್ಕೆ ಎರಡು ವೈರಿಗಳನ್ನು ಎದುರಿಸಿ ನಿಲ್ಲಲಾರದು ಉನ್ನತ ಜಾತಿಯ ಹಿಂದೂವಿನ ವಿರುದ್ಧ ಸಮರದಲ್ಲಿ ತಾವು ಬ್ರಿಟೀಷರ ವಿರೋಧಿಗಳು

ಆದಲ್ಲ ತಮಗೆ ಯಾವುದೇ ಪ್ರಯೋಜನ ಇರುವುದಿಲ್ಲ ಬದಲಿಗೆ ಅವರ ಸ್ನೇಹ ಸಂಪಾದಿಸಿದರೆ, ಅವರ ಬೆಂಬಲದಿಂದ ಜಾತಿ ಪದ್ಧತಿ ವಿರುದ್ಧ ಹೋರಾಟ ಬಹುದೆಂಬುದು ಅಂಬೇಡ್ಕರ್ ಅವರ ಪ್ರಬಲವಾದ ನಿಲುವಾಗಿತ್ತು.'

ಜಾತಿ ಅಸ್ಪೃಶ್ಯತೆಯ ಬಗ್ಗೆ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಆಲೋಚನೆಗಳೆ ಬೇರೆ ಬೇರೆ ರೀತಿಯಾಗಿದ್ದವು. ಗಾಂಧೀಜಿ ಅವರ ಪ್ರಕಾರ "ಹಿಂದೂಗಳ ಮತ್ತು ಅಸ್ಪೃಶ್ಯರ ನಡುವಿನ ಜಗಳ ಒಂದು ಮನೆಯೊಳಗೆ ದಾಯಾದಿ ಕಲಹವಿದ್ದಂತೆ" ಮೊದಲು ಹೊರಗಿನ ವೈರಿಯನ್ನು ಒಟ್ಟಾಗಿ ಸೇರಿ ಓಡಿಸಿ ನಂತರ ತಮ್ಮ ಕಲಹವನ್ನು ಬಗೆಹರಿಸಿಕೊಳ್ಳೋಣ ಎಂದಾದರೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹೊರಗಿನ ವೈರಿ ಇರುವುದರಿಂದ ಮತ್ತು ಅವನ ಆಗಮನದಿಂದ ನಮಗಷ್ಟು ಇಷ್ಟು ಸೌಲಭ್ಯಗಳು ದೊರೆತಿವೆ. ಅವರು ಹೋದ ಮೇಲೆ ಪುನಃ ಜಾತಿ ಹಿಂದೂಗಳ ಕೈಗೆ ಅಸ್ಪೃಶ್ಯರು ಸಿಲುಕಿ ಪುನಃ ಯಥಾಸ್ಥಿತಿಗೆ ಬರುತ್ತಾರೆ ಅದರಿಂದ ನಮಗೆ ದೇಶ ಸ್ವಾತಂತ್ರ್ಯಕ್ಕಿಂತ ನಮ್ಮ ಸ್ವಾತಂತ್ರ್ಯ ಮುಖ್ಯ ಎಂದು ಪ್ರತಿಪಾದಿಸಿದರು.' ಅವರಂತೆ ಭಾರತದ ಚರಿತ್ರೆಯಲ್ಲಿಯೇ ಭಾರತದ ಜಾತಿ ವ್ಯವಸ್ಥೆಯನ್ನು ಕುರಿತು ಇಷ್ಟೊಂದು ಆಳವಾಗಿ ಚಿಂತಿಸಿ ಅಧ್ಯಯನ ಮಾಡಿದವರು, ಅದರ ವಿರುದ್ಧ ಹೋರಾಡಿದವರು ಮತ್ತೊಬ್ಬರು ಇರಲಿಲ್ಲ. ಏಕೆಂದರೆ ಉಳಿದ ಸಮಾಜ ಸುಧಾರಕರು ಜಾತಿವ್ಯವಸ್ಥೆಯನ್ನು ವಿರೋಧಿಸಿ ಅದರಲ್ಲಿ ಬದಲಾವಣೆ ತರಲು ಹೋರಾಟವನ್ನು ನಡೆಸಿರಬಹುದು ಆದರೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಾಗೆ ಜಾತಿ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ವಿಶ್ಲೇಷಿಸಿ ವಿವರಿಸಿದವರಿಲ್ಲ. ಅಂಬೇಡ್ಕರ್ ಅವರಿಗೆ ಜಾತಿ ಒಂದು ಬಹುದೊಡ್ಡ ಒಗ್ಗಟ್ಟಿನ ಹಾಗೆ ಕಾಣಿಸಿದೆ. ಇದನ್ನು ಬಿಡಿಸುವ ನಿರಂತರ ಪ್ರಯತ್ನಕ್ಕೆ ಪ್ರತಿಭಟನಾತ್ಮಕ ಹೋರಾಟ ಮಾಡಿ ತಮ್ಮ ಜೀವನವನ್ನೇ ಅರ್ಪಣೆ ಮಾಡಿಕೊಂಡರು.'

## ಪರಾಮರ್ಶನ ಗ್ರಂಥಗಳು


೧. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು**. ಸಂಪುಟಗಳು – 1 ರಿಂದ 21, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 2015

2. ಸೋಸಲೆ ಚಿನ್ನಸ್ವಾಮಿ ಎನ್: **ಭಾರತೀಯ ಸಮಾಜ ಮತ್ತು ದಲಿತರು,** ಸಿವಿಜೆ ಪಬ್ಲಿಕೇಶನ್, ಬೆಂಗಳೂರು, 2004

3. ದಾಸನೂರು ಕೂಸಣ್ಣ: **ಡಾ.ಬಿ.ಆರ್.ಅಂಬೇಡ್ಕರ್ ಸಾಮಾಜಿಕ ಚಿಂತನೆ,** ಮಾತಾಂಗ ಪ್ರಕಾಶನ, ಮೈಸೂರು, 2001

4. ದಯಾನಂದ ಮಾನೆ: **ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳುವಳಿ,** ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಅಕಾಡೆಮಿ, ಮೈಸೂರು, 2007
5. ಡಾ.ಒಡೆಯರ್ ಡಿ ಹೆಗ್ಗಡೆ: **ಡಾ.ಬಿ.ಆರ್.ಅಂಬೇಡ್ಕರ್,** ಲಕ್ಷ್ಮೀ ಪ್ರಿಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 2009
6. ಅರವಿಂದ ಮಾಲಗತ್ತಿ: **ಭೀಮ ನಡೆಯ ಬೆಳಕು,** ಧಾಮಿನಿ ಸಾಹಿತ್ಯ ಪ್ರಕಾಶನ, ಮೈಸೂರು, 2006
7. ಗಣೇಶ.ಎ.ಜೆ: **ಭಾರತೀಯ ಶೋಷಿತ ವರ್ಗದ ಪ್ರತಿಭಟನಾ ಶಕ್ತಿಯಾಗಿ ಡಾ.ಬಿ.ಆರ್.ಅಂಬೇಡ್ಕರ್ ಒಂದು ಅಧ್ಯಯನ,** ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2010